ಧಾರವಾಡ ಜಿಲ್ಲೆಯ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ.

457 - ಶ್ರೀ ಪಿ.ಸಿ ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿ ವಿವಿಧ ಗ್ರಾಮಗಳಲ್ಲಿ 5 ರಿಂದ 7ನೇ ತರಗತಿಯವರೆಗೆ ತರಗತಿಗಳು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು?*

ಆ) *ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಆ ಶಾಲೆಗಳ ಹಾಜರಾತಿಗೆ ಅನುಗುಣವಾಗಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರಕ್ಕೆ ಇದೆಯೇ?*

ಈ) *ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಉ) *ಇದರ ಬಗ್ಗೆ ಜಿಲ್ಲಾ ಪರಿಷತ್ತಿನವರು 1 ರಿಂದ 4 ರವರೆಗೆ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳನ್ನು ಹಾಜರಾತಿಗನುಗುಣವಾಗಿ 5 ರಿಂದ 7ರವರೆಗೆ ಮುಂದುವರೆಸಲು ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 776.

ಆ) ಬಂದಿದೆ.

ಇ) ಇದೆ.

ಈ) ಉಪ ನಿರ್ದೇಶಕರುಗಳಿಂದ ಪ್ರಸ್ತಾವನೆಗಳು ಈ ಬಗ್ಗೆ ಬಂದರೆ ಪರಿವರ್ತಿಸಲು ನಿರ್ದೇಶಕರ ಮಟ್ಟದಲ್ಲಿಯೇ ಅನುಮತಿ ನೀಡುವಂತೆ ಆದೇಶಿಸಲಾಗಿದೆ.

ಉ) ಪ್ರಸ್ತಾವನೆಗಳು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ಇಲಾಮ್ ವೀರಾಪುರದ ಬೃಹತ್ ನೀರಾವರಿ ಯೋಜನೆ.

526 - ಶ್ರೀ ಪಿ.ಸಿ ಸಿದ್ದನಗೌಡರ್. (ಕಲಘಟಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ತಾಲ್ಲೂಕಿನ ಇಲಾಮ್ ವೀರಾಪುರದ ಬೃಹತ್ ನೀರಾವರಿ ಯೋಜನೆಯನ್ನು ಸರ್ಕಾರವು ಕೈಗೆತ್ತಿಕೊಂಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ ಮೇಲ್ಕಂಡ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ ಹಾಗೂ ಈಗ ಇದಕ್ಕೆ ಖರ್ಚು ಮಾಡಿರುವ ಹಣವೆಷ್ಟು?*

ಇ) *ಈ ಮೇಲ್ಕಂಡ ನೀರಾವರಿ ಯೋಜನೆಯಿಂದ ಯಾವ್ಯಾವ ತಾಲ್ಲೂಕುಗಳಿಗೆ ಮತ್ತು ಹಳ್ಳಿಗಳಿಗೆ ಉಪಯೋಗವಾಗುತ್ತದೆ ಮತ್ತು ಎಷ್ಟು ಎಕರೆ ಭೂಮಿಗೆ ನೀರಾವರಿಯಾಗಿರುತ್ತದೆ?*

ಈ) *ಈ ಮೇಲ್ಕಂಡ ಯೋಜನೆಯಿಂದ ಯಾವ ಹಳ್ಳಿಗಳಿಗೂ ಪ್ರಯೋಜನವಾಗದಿರುವುದರಿಂದ ಇದನ್ನು ಸರ್ಕಾರ ಪುನರ್ ಪರಿಶೀಲಿಸಿ ರದ್ದುಪಡಿಸಲು ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಹುಬ್ಬಳ್ಳಿ ತಾಲ್ಲೂಕಿನ ವೀರಾಪುರ ಮಧ್ಯಮ ನೀರಾವರಿ ಯೋಜನೆ ಇನ್ನೂ ಅನ್ವೇಷಣೆಯ ಹಂತದಲ್ಲಿದೆ.